OS No.14/2015
Dw1

ದಿನಾಂಕ 17.03.2026 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ವಕೀಲರಿಂದಃ**

ಪ್ರತಿವಾದಿ ಸಂಸ್ಥೆ ನೊಂದಣಿ ಆಗಿರುತ್ತದೆಯಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರು ಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಯಾವ ವರ್ಷದಿಂದ ಪ್ರತಿವಾದಿ ಕಂಪನಿ ನಡೆಸುತ್ತಿದ್ದೀರಿ ಎಂದರೆ 2011 ಮತ್ತು 2014 ರಿಂದ ಎರಡು ಕಂಪನಿಗಳನ್ನು ನಡೆಸುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಪ್ರತಿವಾದಿ ಕಂಪನಿ ಹೊರತು ಪಡಿಸಿ ಮತ್ತೊಂದು ಕಂಪನಿ ಯಾವುದು ಎಂದರೆ ಕಾರ್ತಿಕ್ ಇನ್ಫ್ರಾ ಸ್ಟ್ರಕ್ಚರ್ ಎಂದು ನುಡಿದಿರುತ್ತಾರೆ. ಪ್ರತಿವಾದಿ ಕಂಪನಿಗೆ ನೀವು ಮ್ಯಾನೇಜಿಂಗ್ ಡೈರೆಕ್ಟರ್ ಎಂದು ಹೇಳುವ ಬಗ್ಗೆ ದಾಖಲೆ ನೀಡುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ವಾದಿಯು ನಿಮಗೆ ಕಟ್ಟದ ನಿರ್ಮಾಣದ ಪ್ರಪೋಸಲ್ ನೀಡಿರುತ್ತಾರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಯಾವ ದಿನಾಂಕ ನೀಡಿರುತ್ತಾರೆ ಎಂದರೆ ಸೆಪ್ಟೆಂಬರ್ 2014 ರಲ್ಲಿ ಎಂದು ನುಡಿದಿರುತ್ತಾರೆ. ಸದರಿ ಪ್ರಪೋಸಲ್ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಪ್ರಪೋಸಲ್ ಮುಖೇನ ನೀವು ಕಟ್ಟಡ ನಿರ್ಮಿಸಲು ಎಷ್ಟು ಖರ್ಚು ಆಗಿರುತ್ತದೆ ಎಂದರೆ ರೂ.1,37,00,000/- ಎಂದು ನುಡಿದಿರುತ್ತಾರೆ. ವಾದಿ ಮತ್ತು ನಿಮ್ಮ ಮಧ್ಯ ಕರಾರು ಆಗಿರುತ್ತದೆಯಾ ಎಂದರೆ ಬ್ಯಾಂಕ್ ಲೋನ್ ಆದ ನಂತರ ಮಾಡಿಕೊಡುವುದಾಗಿ ಹೇಳಿದ್ದು ಕೆಲಸ ಮಾಡುವಂತೆ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ನೀವು ಇಲ್ಲಿಯವರೆಗೆ ಎಷ್ಟು ಖರ್ಚು ಮಾಡಿರುತ್ತೀರಿ ಎಂದರೆ ಸೈಟ್ ನಲ್ಲಿ ಕೆಲಸಕ್ಕೆ ರೂ. 28 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಹಣ ಖರ್ಚು ಮಾಡಿರುವ ಬಗ್ಗೆ ದಾಖಲಾತಿ ನೀಡಿರುತ್ತೀರಾ ಎಂದರೆ ವಕೀಲರ ಬಳಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ರೂ. 28 ಲಕ್ಷ ಖರ್ಚು ಮಾಡಿರುವ ಬಗ್ಗೆ ಬಿಲ್ ಗಳನ್ನು ಹಾಜರು ಪಡಿಸುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ನೀವು ರೂ. 10

ಲಕ್ಷ ಮಾತ್ರ ಖರ್ಚು ಮಾಡಿರುತ್ತೀರಿ 28 ಲಕ್ಷ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯು ಹಾಜರು ಪಡಿಸಿರುವ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಮುಂದುವರೆದು ಕೆಲವೊಂದು ಮಾತ್ರ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ವಾದಿಯು ಹಾಜರು ಪಡಿಸಿರುವ ನಿಪಿ-23 ನ್ನು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ನೀವು 10 ಲಕ್ಷ ಖರ್ಚು ಮಾಡಿರುವ ಕಾರಣ ರೂ. 5 ಲಕ್ಷ ವನ್ನು ವಾದಿಗೆ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**